40

ಆಭರಣಗಳ ಪೆಟ್ಟಿಗೆ

ಮತ್ತು

ಇತರ ಕಥೆಗಳು

ಅನುವಾದಕರು:

ಶ್ರೀ| ಬಳ್ಕೂರು ಸುಬ್ರಾಯ ಅಡಿಗ,

ಗಂಗೊಳ್ಳಿ.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗ

ಆಭರಣಗಳ ಪೆಟ್ಟಿಗೆ

ಮತ್ತು ಇತರ ಕಥೆಗಳು

---

೧. ಆಭರಣಗಳ ಪೆಟ್ಟಿಗೆ

ಒಂದು ದಿನ ನಾಲ್ವರು ಕಳ್ಳರು ಒಬ್ಬ ಶ್ರೀಮಂತನ ಮನೆಗೆ ಕನ್ನ ಹಾಕಲು ಹೋದರು. ರಾತ್ರಿಯ ವೇಳೆ ಯಜಮಾನ ಮನೆಯಲ್ಲಿರಲಿಲ್ಲ. ಸುಸಂದರ್ಭಪಡೆದ ಕಳ್ಳರು ಇಂದು ಒಳ್ಳೇ ಮುಹೂರ್ತದಲ್ಲಿ ಹೊರಟದ್ದೇ ವೆಂದು ಹಿರಿಹಿರಿ ಹಿಗ್ಗಿದರು.

ಶ್ರೀಮಂತನ ಹೆಂಡತಿ ಮತ್ತು ಮಗಳು ಅಡಿಗೆಮನೆಯಲ್ಲಿ ನಿದ್ರಿಸಿದ್ದರು. ಅದೃಷ್ಟವಶಾತ್ ಕಳ್ಳರ ಸಪ್ಪಳ ಕೇಳಿ ಹುಡುಗಿಗೆ ಎಚ್ಚರ ವಾಯಿತು. ಮೆಲ್ಲನೆ ತಾಯಿಯನ್ನು ಎಬ್ಬಿಸಿ—'ಕಳ್ಳರು ನುಗ್ಗಿದ್ದಾರೆ' ಎಂದು ತಿಳಿಸಿದಳು.

ತಾಯಿಯು ಗಾಬರಿಯಿಂದೆದ್ದು ಸ್ವಲ್ಪ ಹೊತ್ತಿನ ತನಕ ಏನುಮಾಡ ಬೇಕೆಂದು ಯೋಚಿಸುತ್ತಾ ಇದ್ದಳು. ಕೂಗಿದರೆ ಕಳ್ಳರು, ಬಂದು ಕುತ್ತಿಗೆ ಹಿಸುಕಿ ಕೊಂದುಹಾಕಿಯಾರು. ಆಗ ಸಾಮಾನುಗಳಿಲ್ಲದೆ ಪ್ರಾಣವೂ ವ್ಯರ್ಥವಾಗಿ ಹೋಗುವುದು. ಯೋಚಿಸುತ್ತಿದ್ದಂತೆಯೇ ಅವಳಿಗೊಂದು ಯುಕ್ತಿ ಹೊಳೆಯಿತು. ಅವಳು ಹುಡುಗಿಯ ಕಿವಿಯಲ್ಲೇನೋ ಹೇಳಿದಳು.

ಮಗಳು ಸ್ವಲ್ಪ ಜೋರಾಗಿ ಹೇಳಿದಳು—'ಅಮ್ಮಾ-ಅಮ್ಮಾ, ನನ್ನ ಚಿನ್ನಾಭರಣಗಳನ್ನೆಲ್ಲಿ ಇಟ್ಟಿದ್ದಿ?' 'ಮಗೂ, ಸುಮ್ಮನಿರು. ಇದು ಆಭರಣ ಗಳನ್ನು ಕೇಳುವ ಸಮಯವೆ? ಯಾರಾದರೂ ನಮ್ಮ ಮಾತು ಕೇಳಿದರೆ ಒಂದೂ ಉಳಿಯಲಾರದು.' ಹುಡುಗಿ ತುಸುಹೊತ್ತು ಸುಮ್ಮನಿದ್ದಳು. ಬಳಿಕ ತಡೆಯಲಾರದೆ—'ಅಮ್ಮಾ, ಹೇಳಿಬಿಡು; ನೀನು ಹೇಳುವ ವರೆಗೆ ನನಗೆ ಸಮಾಧಾನವಿಲ್ಲ.' ತಾಯಿ ಸಿಟ್ಟಾಗಿ ಹೇಳಿದಳು—'ತಂದೆಯವರು

ಕಾನಪುರಕ್ಕೆ ಹೋಗುವಾಗ ಹೇಳಿದುದನ್ನು ನೀನು ಕೇಳಿಲ್ಲವೆ? ಅವರ ಹೇಳಿಕೆಯಂತೆ ನಿತ್ಯ ಸಂಜೆ ಕತ್ತಲಾದೊಡನೆಯೇ ಆ ಬಂಜರುಭೂಮಿಯ ತುದಿಯಲ್ಲಿರುವ ದೊಡ್ಡ ಬೇವಿನಮರದ ಮೇಲೆ ಇಟ್ಟುಬರುತ್ತೇನೆ. ನೀನೆಷ್ಟು ಹಟಗಾರ್ತಿ! ಬೆಳಗಾಗಲಿ. ನಿನ್ನ ಪೆಟ್ಟಿಗೆಯನ್ನು ತಂದೊಪ್ಪಿಸುತ್ತೇನೆ. ಇನ್ನುಮೇಲೆ ನೀನೇ ಅದನ್ನಿಟ್ಟುಕೋ; ನನಗೇನು?

ಮಾತುಮಾತಿನಲ್ಲೇ ತಾಯಿಮಗಳಲ್ಲಿ ಚರ್ಚೆ ಆರಂಭವಾಯಿತು, ಗದ್ದಲ ಕೇಳಿ ಅಕ್ಕಪಕ್ಕದ ಜನರು ಓಡಿಬಂದರೇನು ಗತಿಯೆಂದು ಹೆದರಿ ಕಳ್ಳರು ಅಲ್ಲಿಂದ ಕಾಲ್ದೆಗೆದರು; ಅಲ್ಲದೆ ಆ ಮರದ ಮೇಲೆಯೇ ಹೋಗಿ ಚಿನ್ನದ ಪೆಟ್ಟಿಗೆಯನ್ನು ಹಾರಿಸಬೇಕೆಂದು ನಿಶ್ಚಯಿಸಿದರು.

ಈ ರೀತಿ ಎಣಿಸಿ ಅವರೆಲ್ಲರೂ ಆ ಬೇವಿನಮರದ ಬುಡಕ್ಕೆ ತಲುಪಿದರು. ಕಾರಿರುಳು; ಎಲ್ಲೆಡೆಯಲ್ಲೂ ಕತ್ತಲು ಮುಸುಕಿತ್ತು. ಆಕಾಶದಲ್ಲಿ ಕಾರ್ಮೋಡಗಳು ಹಬ್ಬಿದ್ದುವು. ಹೀಗಾಗಿ ಪ್ರಕಾಶಕ್ಕಾಗಿ ಮಿಂಚಿನ ಹಾದಿ ನೋಡತೊಡಗಿದರು. ಈ ನಡುವೆ ಶ್ರೀಮಂತನೂ ಮನೆಗೆ ಬಂದುದರಿಂದ ತಾಯಿಮಗಳಿಬ್ಬರಿಗೂ ಹೋದ ಜೀವ ಮರಳಿಬಂದಂತಾಯಿತು.

ಇಷ್ಟರಲ್ಲೇ ಮಿಂಚುಮಿಂಚಿತು; ಚಂದ್ರನೂ ಮೂಡಿಬಂದ. ಕಳ್ಳರು ಮರದ ಮೇಲೆ ನೋಡಿದರು. ಅಲ್ಲಿದ್ದ ಕಣಜದ ಗೂಡನ್ನು ಕಳ್ಳರು ಆಭರಣಗಳ ಪೆಟ್ಟಿಗೆಯೆಂದು ಭ್ರಮಿಸಿದರು. ನೋಡಿ ಸಂತುಷ್ಟರಾಗಿ, ಒಮ್ಮೆಲೇ ಎಲ್ಲರೂ ಮರವೇರಿದರು. ಏಕೆಂದರೆ ಒಬ್ಬರಿಗೆ ಮತ್ತೊಬ್ಬರ ಮೇಲೆ ಭರವಸೆಯಿದ್ದಿಲ್ಲ. ಅವರಲ್ಲೊಬ್ಬನು ಆ ಗುಂಪಿನ ಮೇಲೆ ಕೈಯಿಕ್ಕುತ್ತಲೇ ಎಲ್ಲ ನೊಣಗಳು ಚದರಿ ಕಳ್ಳರನ್ನೆಲ್ಲ ಕಚ್ಚತೊಡಗಿದವು. ಎಲ್ಲರೂ ಬೇಗ ಬೇಗನೆ ಮರದಿಂದಿಳಿದು ಓಡಿಬಿಟ್ಟರು. ಆದರೂ ನೊಣಗಳು ಅವರನ್ನು ಬೆನ್ನಟ್ಟಿ ಕಚ್ಚುತ್ತಿದ್ದವು.

ಬೆಳಗ್ಗೆ ತಾಯಿ, ಮಗಳು ಯಜಮಾನನಿಗೆ ತಮ್ಮ ಉಪಾಯ ತಿಳಿಸಿದಾಗ ಅವರು ಬಿದ್ದುಬಿದ್ದು ನಕ್ಕರು.

೨. ವಸ್ತ್ರವೂ ಇವರದೇ!

ಮಹಾಶಯರೊಬ್ಬರು ಕ್ಷೌರಿಕನೊಟ್ಟಿಗೆ ತಮ್ಮ ಮಾವನ ಮನೆಗೆ ಹೋದರು. ದಾರಿಯಲ್ಲಿ ಅವರಿಗೆ ಕ್ಷೌರಿಕನ ಬಳಿಯಿರುವ ಬಟ್ಟೆಯೇ ಉತ್ತಮವೆಂದು ತೋರಿತು. ಅವರು ಅವನೊಡನೆ—'ಮಾವನ ಮನೆಯಲ್ಲಿರುವಷ್ಟರ ವರೆಗೆ ನಿನ್ನ ಉಡುಪನ್ನು ಕೊಡು. ಬಳಿಕ ದಾರಿಯಲ್ಲಾಗಲೀ ಮನೆಯಲ್ಲಾಗಲೀ ವಾಪಾಸು ಪಡೆದುಕೊಳ್ಳಬಹುದು' ಎಂದರು. ಕ್ಷೌರಿಕನು ಈ ಮಾತಿಗೊಪ್ಪಿ ತನ್ನ ಉಡುಪನ್ನು ತೆಗೆದು ಅವರಿಗೆ ಕೊಟ್ಟ.

ಮಾವನ ಮನೆಗೆ ತಲುಪಿದಾಗ ಅಲ್ಲಿ ಅಳಿಯನ ಸಂಭ್ರಮವನ್ನು ಕಂಡು ಹೊಗಳಲಾರಂಭಿಸಿದರು. ಒಬ್ಬರು ಅವನ ಕೋಟನ್ನು ಹೊಗಳಿದರೆ ಮತ್ತೊಬ್ಬರು ಮುಂಡಾಸನ್ನು ವರ್ಣಿಸುತ್ತಿದ್ದರು. ಕ್ಷೌರಿಕನು ತುಸು ಹೊತ್ತು ಸುಮ್ಮನೆ ಕೇಳುತ್ತಾ ಕುಳಿತ. ಕೊನೆಗೆ ಹೇಳಿಯೇ ಬಿಟ್ಟನು— 'ಉಳಿದೆಲ್ಲ ಸಾಮಾನು ಅವರದೇ. ಆದರೆ ವಸ್ತ್ರ ಮಾತ್ರ ನನ್ನದು.' ಅಪರಿಚಿತರು ವರನ ವಿಷಯವಾಗಿ ವಿಚಾರಿಸಿದಾಗ ಅವನು—'ಇವರೇ ವರ; ಆದರೆ, ಇವರ ಬಳಿಯಿರುವ ಬಟ್ಟೆ ಮಾತ್ರ ನನ್ನದು' ಎಂದು ಹೇಳುತ್ತಿದ್ದ.

ಎಲ್ಲರೂ ಈ ಸಂಗತಿ ಕೇಳಿ ಕೇಳಿ ನಗುತ್ತಿದ್ದರು. ಆದರೆ ವರನಿಗೆ ಮಾತ್ರ ತುಂಬ ಸಿಟ್ಟುಬಂತು. ಅಲ್ಲಿದ್ದವರೆಲ್ಲ ಎದ್ದುಹೋದಾಗ ಅವನು ಕ್ಷೌರಿಕನೊಡನೆ—'ನೀನೊಬ್ಬ ಮಹಾಮೂರ್ಖ. ನಾಲ್ಕು ಮನುಷ್ಯರೆದುರಿಗೆ ನನ್ನನ್ನು ಅವಮಾನಿಸುತ್ತೀ. ಬಟ್ಟೆಯ ಕುರಿತು ನಿನ್ನನ್ನಾರು ಕೇಳಿದರು? ಇನ್ನೆಂದೂ ಅದರ ಸುದ್ದಿ ಎತ್ತಬೇಡ' ಎಂದ.

'ಸ್ವಾಮಿ, ನನ್ನ ತಪ್ಪನ್ನು ಕ್ಷಮಿಸಿ. ಇನ್ನೆಂದೂ ಹೀಗಾಗದಂತೆ ನೋಡಿಕೊಳ್ಳುತ್ತೇನೆ.'

ಮತ್ತೊಮ್ಮೆ ಕೆಲ ಮನುಷ್ಯರು ಬಂದು ವರನ ಪರಿಚಯಮಾಡಿಕೊಳ್ಳತೊಡಗಿದರು. ಕ್ಷೌರಿಕನೆಂದ—'ಇವರ ಬಳಿಯಿರುವ ವಸ್ತುಗಳೆಲ್ಲ ಇವರದೇ. ಬಟ್ಟೆಯ ವಿಚಾರ ಮಾತ್ರ ನಾನೇನೂ ಹೇಳುವುದಿಲ್ಲ. ಇವರ ಬಳಿ ಸೊಗಸಾದ ಬಟ್ಟೆಯಿದೆಯಲ್ಲ.........ಹೋಗಲಿ, ಆ ವಿಷಯವೇಕೀಗ?'

ವರನು ಈಗಲೂ ಬಂದ ಸಿಟ್ಟನ್ನು ನುಂಗಿ ಕುಳಿತ. ಎಲ್ಲರೂ ಹೋದ ಮೇಲೆ ಕ್ಷೌರಿಕನನ್ನು ಕರೆದು—'ನೀನೊಬ್ಬ ನೀಚ. ನಿನ್ನ ಸ್ವಭಾವ ಬಿಡು

ವುದೇ ಇಲ್ಲ. ತಿರುತಿರುಗಿ ವಸ್ತ್ರದ ವಿಚಾರವೆತ್ತುತ್ತಿ. ನಾವಿಲ್ಲಿರುವ ವರೆಗೆ ವಸ್ತ್ರ ನಿನ್ನದಲ್ಲ—ನನ್ನದೆಂದೇ ತಿಳಿದುಕೋ. ಈ ಬಾರಿ ಯಾರು ಕೇಳಿದರೂ ಬಟ್ಟೆಯ ವಿಚಾರವೆತ್ತಬೇಡ. ನೆನಪಿರಲಿ!'

ಈ ಸಲ ಕ್ಷೌರಿಕನಿಗೆ ಚೆನ್ನಾಗಿ ಎಚ್ಚರಕೊಟ್ಟಿದ್ದೇನೆಂದು ವರ ಸಂತೋಷಗೊಂಡಿದ್ದ. ಆದರೆ ಸ್ವಲ್ಪ ಹೊತ್ತಿನಲ್ಲೇ ಬೇರೆ ಕೆಲವರು ಬಂದು ಅದೇ ಪ್ರಶ್ನೆಯನ್ನು ಕೇಳಿದಾಗ ಕ್ಷೌರಿಕನು ಪುನಃ 'ವರ ಏನೋ ಅವರೇ.... (ಇಷ್ಟು ಹೇಳಿ ಪುನಃ ತುಸು ಯೋಚಿಸಿ)....ವಸ್ತ್ರವೂ ಇವರದೇ ನಿಜ' ಎಂದ.

ಮಕ್ಕಳೇ, ಆದ್ದರಿಂದ 'ಅಲ್ಪರ ಸಂಗ ಅಭಿಮಾನ ಭಂಗ'ವೆಂಬ ಗಾದೆ ನಿಜವಾಯಿತು. ನೀವೆಂದೂ ನೀಚರ ಉಪಕಾರ ಪಡೆಯಬಾರದು. ಹಾಗೆ ಪಡೆದರೆ, ತುಂಬಿದ ಸಭೆಯಲ್ಲಿ ನಿಮ್ಮ ಮರ್ಯಾದೆಯನ್ನು ಕಳೆದುಕೊಳ್ಳಬೇಕಾಗುವುದು.

---

೩. ಪ್ರತೀಕಾರ

ಯಾತ್ರಿಕನೊಬ್ಬನು ಯಾವುದೋ ಒಂದು ಪಟ್ಟಣದ ಛತ್ರದಲ್ಲಿಳಿದುಕೊಂಡ. ಛತ್ರದ ಅಡಿಗೆಯವನಿಗೆ ತುಸು ಹಣಕೊಟ್ಟು ಖೀರು ತಯಾರಿಸಲು ಹೇಳಿದ. ಅಡಿಗೆಯವನು ತುಂಬಾ ಚತುರನಿದ್ದ. ಹಣಪಡೆದು ಖೀರಿನ ಬದಲಿಗೆ ಗಂಜಿಯನ್ನು ಬೇಯಿಸಿದ. ಗಂಜಿಯನ್ನು ಆ ಯಾತ್ರಿಕನ ಬಳಿಗೊಯ್ದು—'ಈಗಲೇ ಕುಡಿಯಿರಿ; ಇಲ್ಲದಿದ್ದರೆ ಹಾಳಾಗುವ ಸಂಭವವಿದೆ. ಏಕೆಂದರೆ ಇಲ್ಲಿಯ ಹವೆ ತುಂಬಾ ಕೆಟ್ಟದ್ದು' ಎಂದು ಹೇಳಿದ.

ಯಾತ್ರಿಕ ಬಹು ಸರಳ ಸ್ವಭಾವಿ. ಪಾತ್ರೆಯನ್ನಲ್ಲೇ ಇರಿಸಿ ತನ್ನ ಕೆಲಸಕ್ಕೆ ಹೊರಟುಹೋದ. ಸ್ವಲ್ಪ ಹೊತ್ತಿನಲ್ಲೇ ಅವನು ಆ ಪಾತ್ರೆಯನ್ನು ತೆರೆದಾಗ ಒಳಗೆ ಗಂಜಿಯಿದೆಯೆಂದು ತಿಳಿಯಿತು. ಯಾತ್ರಿಕ, ಅಡಿಗೆಯವನನ್ನು ಕರೆದು—'ನಾನು ಖೀರುಮಾಡಲು ಹೇಳಿದ್ದೆನಲ್ಲ!' ಎಂದ. 'ಹೌದು; ನಾನು ನಿಮಗೆ ಮೊದಲೇ ತಿಳಿಸಲಿಲ್ಲವೆ? ಈ ಪಟ್ಟಣದ ಹವೆ ಕೆಟ್ಟುಹೋಗಿದೆ. ನಾನೇನೋ ಖೀರನ್ನೇ ತಯಾರಿಸಿದ್ದೆ. ಆದರೆ ಈಗ ಮಾತ್ರ ಗಂಜಿಯಾಗಿ ಬಿಟ್ಟಿದೆ' ಎಂದ. ಪಾಪದ ಯಾತ್ರಿಕ ಮಾತಾಡಲಿಲ್ಲ.

ತುಸುಹೊತ್ತಿನ ಬಳಿಕ ಮತ್ತೊಬ್ಬ ಯಾತ್ರಿಕ ಅದೇ ಛತ್ರದಲ್ಲಿ ಬಂದಿಳಿದ. ಮೊದಲಿನವನು ನಡೆದುದನ್ನೆಲ್ಲ ಅವನಿಗೆ ತಿಳಿಸಿದ. ಎರಡನೆಯವನು ಜಾಣ. ಅವನಿಗೆ ಬುದ್ಧಿ ಕಲಿಸಬೇಕೆಂದು ನಿಶ್ಚಯಿಸಿದ. ಅವನು ರಾತ್ರಿ ಅಡಿಗೆಯವನ ಪಾತ್ರೆಗಳನ್ನೆಲ್ಲ ಒಟ್ಟುಮಾಡಿ ಪೇಟಿಯಲ್ಲಿ ಮಾರಿದ, ಮತ್ತು ಅದಕ್ಕೆ ಬದಲು ಮಣ್ಣಿನ ಪಾತ್ರೆಗಳನ್ನು ತಂದಿಟ್ಟ. ಬೆಳಗ್ಗೆ ಅಡಿಗೆಯವನು ಪಾತ್ರೆಗಳನ್ನು ನೋಡಿದೊಡನೆಯೇ 'ನನ್ನ ಹಿತ್ತಾಳೆ ಪಾತ್ರೆಗಳೆಲ್ಲ ಮಣ್ಣಿನ ಮಡಕೆಗಳೆಂತಾದವು!' ಎಂದು ಅರಚಿದ. ಆಗ ಎರಡನೇ ಯಾತ್ರಿಕನೆಂದ—'ಕೂಗುತ್ತಿಯೇಕೆ? ಈ ಪಟ್ಟಣದ ಹವೆ ಕೆಟ್ಟದೆಯೆಂದು ನೀನೇ ಹೇಳಿರುವೆಯಲ್ಲ! ಖೀರು ಗಂಜಿಯಾದಂತೆಯೇ ಹಿತ್ತಾಳೆ ಪಾತ್ರೆಗಳು ಮಡಕೆಗಳಾದವು.'

ಅಡಿಗೆಯವನೇನೂ ಹೇಳದಾದ. ಅವನು ಬುದ್ಧಿಗಲಿತು ಸುಮ್ಮನಾದ.

---

೪. ಅಳಿಯದೇವರ ಮೂರ್ಖತನ

ಮೋಹನ ಬಾಬುಗಳು ಯಾವುದೋ ಅಗತ್ಯದ ಕೆಲಸಕ್ಕಾಗಿ ಮಾವನ ಮನೆಗೆ ಹೋಗಿದ್ದರು. ಅಲ್ಲಿ ಇವರಿಗೆ ಚೆನ್ನಾಗಿ ಸತ್ಕಾರವಾಯಿತು. ಆಗ ಮಾವನ ಮನೆಯಲ್ಲಿ ಬೇರಾವ ಗಂಡಸರೂ ಇದ್ದಿಲ್ಲ. ಮಾವ ಶಂಕರ ಸಿಂಹರೂ ಭಾವ ಹನುಮಂತ ಸಿಂಹರೂ ವ್ಯಾಪಾರಕ್ಕಾಗಿ ಪರವೂರಿಗೆ ಹೋಗಿದ್ದರು. ಮನೆಯಲ್ಲಿ ಅತ್ತೆ ಮತ್ತು ಹೆಂಡತಿ ಮಾತ್ರ ಇದ್ದರು. ಗಂಡಸರೆಂದರೆ ಈ ಅಳಿಯದೇವರೊಬ್ಬರೇ. ಹಗಲಿರುಳೂ ಉದರಪೂಜೆಯೊಂದೇ ಇವರ ಕೆಲಸ. ಮತ್ತೇನು ಬೇಕು? ಓದುಬರಹದಲ್ಲಿ ಇವರು ಕುಂಬ ದಡ್ಡರಾಗಿದ್ದರೂ ತೋರಿಕೆಗೆ ಯಾವಾಗಲೂ ಪತ್ರಿಕೆಯ ಪುಟ ತಿರುವುತ್ತಿದ್ದರು. ಅವರ ಠೀವಿಯನ್ನು ಕಂಡೇ ಊರವರು ಅವರನ್ನು ದೊಡ್ಡ ವಿದ್ವಾಂಸರೆಂದು ಬಗೆಯುತ್ತಿದ್ದರು.

ಒಂದು ದಿನ ಹೀಗೆ ಕುಳಿತಿದ್ದಂತೆ ಪೇದೆ ಒಂದು ಪತ್ರ ತಂದುಕೊಟ್ಟ. ಪತ್ರ ತೆರೆದೊಡನೆಯೇ ಇವರ ಕಂಗಳು ಹನಿಗೂಡಿದವು. ಈ ಸ್ಥಿತಿಯನ್ನು ಕಂಡಾಗ ಪರದೇಶಕ್ಕೆ ಹೋದ ಯಜಮಾನರಿಗೆ ಏನೋ ವಿಪತ್ತು ಒದಗಿರಬೇಕೆಂದು ಮನೆಯವರು ಭಾವಿಸಿದರು. ಆದ್ದರಿಂದ ಅವರೂ ಅಳತೊಡ

ಗಿದರು. ಈ ಸಮಾಚಾರ ಕೇಳಿದ ಅಕ್ಕಪಕ್ಕದವರೂ ಬಂದರು. ಅವರ ಲ್ಲೊಬ್ಬ ಪತ್ರ ಕಸಿದುಕೊಂಡು ಓದಿದ. ಅದರಲ್ಲೇನೂ ಕೆಟ್ಟ ಸುದ್ದಿಯಿರ ಲಿಲ್ಲ. ಅವರಿಗೆಲ್ಲ ಅಚ್ಚರಿಯಾಯಿತು. ಅಳುವಿನ ಕಾರಣ ಕೇಳಿದಾಗ ಅಳಿಯ ದೇವರೆಂದರು–"ನಾನು ಶಾಲೆಯಲ್ಲಿ ಕಲಿಯುತ್ತಿದ್ದಾಗ 'ಕ' ಅಕ್ಷರ ಬರೆಯುವುದಕ್ಕೆ ಇಡೀ ಸ್ಲೇಟ್ ಬೇಕಾಗುತ್ತಿತ್ತು. ಅದೇ 'ಕ' ಇಂದು ಸಣ್ಣದೂ ಬಡಕಲೂ ಆಗಿದೆ. ಜನರು ಇದಕ್ಕೆ ಅನ್ನ ಹಾಕುವುದಿಲ್ಲವಲ್ಲಾ ಎಂದು ದುಃಖವಾಯಿತು." ಇವರ ಈ ಮೂರ್ಖತನದ ಮಾತು ಕೇಳಿ ಜನರೆಲ್ಲ ನಕ್ಕುಬಿಟ್ಟರು. ಇವರೆಂತಹ ಅಮೋಘ ವಿದ್ವಾಂಸರೆಂದು ಅಂದೇ ಜನರಿಗೆಲ್ಲ ಗೊತ್ತಾಯಿತು.

ಒಂದು ದಿನ ಮೋಹನಬಾಬುಗಳು ನಿದ್ರಿಸಹೋದಾಗ ಎಲ್ಲೆಡೆ ಯಲ್ಲೂ ಮೇಣದ ಬತ್ತಿಗಳು ಉರಿಯುತಿದ್ದುವು. ಇವರದನ್ನು ಕಂಡು.... 'ಆಹಾ! ಎಂತಹ ಪ್ರಕಾಶ! ಮನೆಗೆ ಹೋಗುವಾಗ ಒಂದನ್ನು ಒಯ್ದರೆ, ತುಂಬಾ ಲಾಭವಾದೀತು' ಎಂದೆಣಿಸಿದರು. ರಾತ್ರಿ ಮನೆಯವರೆಲ್ಲ ಮಲ ಗಿದ ಮೇಲೆ ಇವರು ಮೆಲ್ಲನೆ ಉರಿಯುತ್ತಿರುವ ಒಂದು ಮೇಣದ ಬತ್ತಿ ಯನ್ನು ಕೊಂಡೊಯ್ದು ಮನೆಯ ಮಾಡಿನಲ್ಲಿ ಅಡಗಿಸಿಟ್ಟರು. ಹುಲ್ಲು-ಮಾಡಿಗೆ ಕೂಡಲೇ ಬೆಂಕಿಹತ್ತಿಕೊಂಡಿತು. ಮನೆ ಉರಿದು ಬೂದಿಯಾ ಯಿತು. ಬೆಂಕಿ ತಗಲಿದೊಡನೆಯೇ ಅತ್ತೆ ಎಚ್ಚತ್ತುದರಿಂದ ಎಲ್ಲರೂ ಸುರಕ್ಷಿತವಾಗಿ ಹೊರಸೇರಿದರು.

ಮತ್ತೊಂದು ದಿನ ಇವರು ಕುಡುಗೋಲು ಹಿಡಿದು ಧಾನ್ಯ ಕೊಯ್ದು ತರಲು ನಡೆದರು. ಆದರೆ ಭಾಗ್ಯ ಬದಲಾಗಿತ್ತು. ಉರಿಬಿಸಿಲಲ್ಲಿ ಕುಡು ಗೋಲು ಸುಡತೊಡಗಿತ್ತು. ಈಗ ಅವರು....'ನನ್ನ ಕುಡುಗೋಲಿಗೆ ಗಂಟಲಿಯ ಜ್ವರ ಬಂದಿದೆಯೆಂದು ಕೆರೆಯೊಂದರ ಏರಿಯ ಮೇಲೆ ಕುಳಿತು ಅಳತೊಡಗಿದರು. ಅಷ್ಟರಲ್ಲೇ ಕುಡುಗೋಲು ಕೈತಪ್ಪಿ ಕೆರೆಗೆ ಬಿತ್ತು. ನೀರಿನಿಂದ ಎತ್ತಿದಾಗ ಜ್ವರವೆಲ್ಲ ಹಾರಿಹೋಗಿತ್ತು. ಇವರ ಸಂತೋಷಕ್ಕೆ ಮೇರೆಯಿಲ್ಲ. ಮನೆಗೆ ಬಂದು....'ನಾನೀಗ ಡಾಕ್ಟರರನ್ನು ಮೀರಿಸಿದ್ದೇನೆ' ಎಂದು ಹೆಮ್ಮೆಕೊಚ್ಚತೊಡಗಿದರು. ಅದೃಷ್ಟಕ್ಕೆ ಸರಿಯಾಗಿ ಅದೇ ದಿನ ಅತ್ತೆಗೆ ಜ್ವರ ಬಂದುಬಿಟ್ಟಿತು. 'ತಾಯಿಯ ನಾಡಿಯನ್ನು ಪರೀಕ್ಷಿಸಿರೆಂದು ಹೆಂಡತಿ ಬಂದು ಹೇಳಿದಳು. ಇವರು ಕೂಡಲೇ ಹಗ್ಗ ಬಿಗಿದು ಅವಳನ್ನು

ಬಾವಿಯಲ್ಲಿ ಹಾಕಿಬಿಟ್ಟರು. 'ನೀರಿಗೆ ಹಾಕಿದಾಗ ಕುಡುಗೋಲು ಸರಿಯಾದ ಮೇಲೆ ಮನುಷ್ಯನೇಕೆ ಸ್ವಸ್ಥನಾಗಲಾರ?'—ಎಂಬುದೇ ಅವರ ತರ್ಕ. ಬಾವಿಯಲ್ಲಿ ಹಾಕಿದ ಮೇಲೆ, ಅತ್ತೆಯ ಹಲ್ಲುಗಳು ಹೊರಬಂದಾಗ.... 'ಅತ್ತೆ ನಗುತ್ತಿದ್ದಾಳೆ' ಎಂದು ಅವರೆಣಿಸಿದರು. ಆದರೆ ಅವಳು ನೇರಾಗಿ ಸ್ವರ್ಗಕ್ಕೇ ನಡೆದಿದ್ದಳು.

ಮೋಹನಬಾಬುಗಳಿಗೆ ಬಹುಹೊತ್ತಿನ ಮೇಲೆ ಸತ್ಯಸ್ಥಿತಿಯು ಅರಿವಾದಾಗ ಅವರು ಹೆಂಡತಿಯೊಡನೆ ಕೂಡಲೇ ತಮ್ಮೂರಿಗೆ ನಡೆದುಬಿಟ್ಟರು.

ಮಾವ ಭಾವಂದಿರು ಪರದೇಶದಿಂದ ಬಂದು ಅಳಿಯನ ಸಾಹಸ ಕೇಳಿದಾಗ ತುಂಬಾ ದುಃಖಿತರಾದರು. ಆದರೆ ಮಾಡುವುದೇನು? ಕೈಕೈ ಹೊಸೆದುಕೊಂಡು ಸುಮ್ಮನಾದರು.

---

೫. ಅಡಿಗೆಯವಳ ಜಾಣ್ಮೆ

ಒಂದು ದಿನ ಯಜಮಾನನು ತನ್ನ ಅಡಿಗೆಯವಳೊಡನೆ—'ಇಂದು ನಮ್ಮ ಮನೆಗೊಬ್ಬರು ಅತಿಥಿ ಬರುತ್ತಾರೆ. ಅವರಿಗಾಗಿ ಭರ್ಜರಿ ಔತಣವಾಗಬೇಕು' ಎಂದು ಆಜ್ಞಾಪಿಸಿ, ಪೇಟೆಯಿಂದ ಎರಡು ಒಳ್ಳೆಯ ಮಾವಿನ ಹಣ್ಣುಗಳನ್ನೂ ತರಹೇಳಿದ. ಅಡಿಗೆಯವಳು ಯಜಮಾನನ ಮಾತಿನಂತೆ ಎಲ್ಲ ವಸ್ತುಗಳನ್ನೂ ತಯಾರಿಸಿದಳು; ಮತ್ತು ಎರಡು ಮಾವಿನಹಣ್ಣುಗಳನ್ನೂ ತರಿಸಿಟ್ಟಳು. ಇಷ್ಟಾದರೂ ಅತಿಥಿಯ ಸವಾರಿ ಬರಲಿಲ್ಲ. ಮಾವಿನ ಹಣ್ಣುಗಳನ್ನು ಕಂಡ ಅಡಿಗೆಯವಳ ಬಾಯಲ್ಲಿ ನೀರೂರಿತು. ಹಣ್ಣು ಸಿಹಿಯೋ ಹುಳಿಯೋ, ನೋಡೋಣವೆಂದು ಭಾವಿಸಿ ಚೂರಿಯಿಂದ ತುಸು ಕತ್ತರಿಸಿ ಬಾಯಲ್ಲಿಟ್ಟಳು. ಅದು ಬಹಳ ರುಚಿಯಾಗಿದ್ದುದರಿಂದ ಬಿಡಲು ಮನಸ್ಸೇ ಆಗಲಿಲ್ಲ. ಆದ್ದರಿಂದ ಇಡೀ ಹಣ್ಣನ್ನೇ ತಿಂದುಬಿಟ್ಟಳು.

ಇನ್ನೂ ಅತಿಥಿ ಬಂದಿರಲಿಲ್ಲ. ಯಜಮಾನನು ಬಂದು 'ಅಡಿಗೆ ಸಿದ್ಧವಿದೆಯೆ?' ಎಂದು ಕೇಳಿದ. 'ಅಡಿಗೆಯೆಲ್ಲ ತಣ್ಣಗಾಗುತ್ತಿದೆ. ಇನ್ನೂ ಸ್ವಲ್ಪ ಸಮಯದೊಳಗೆ ಬಾರದಿದ್ದರೆ ಕೆಟ್ಟೇಹೋಗುವುದು.'

'ನಾನೀಗಲೇ ಕರೆತರುತ್ತೇನೆ'ಂದು ಯಜಮಾನ ಅಲ್ಲಿಂದ ಹೊರಬಿದ್ದ. ಅಡಿಗೆಯವಳು ಎಲ್ಲಾ ಪದಾರ್ಥಗಳನ್ನೂ ನೋಡತೊಡಗಿದಳು. ಅವುಗಳ ಪರಿಮಳಕ್ಕೆ ಇವಳ ಮನ ಸೋತಿತು. ಸ್ವಲ್ಪ ಸ್ವಲ್ಪವೇ ತೆಗೆದು ತಿನ್ನತೊಡಗಿದಳು. ಆಗ ಉಳಿದ ಮತ್ತೊಂದು ಮಾವಿನ ಹಣ್ಣಿನ ಕಡೆ ಅವಳ ದೃಷ್ಟಿ ಹರಿಯಿತು. 'ಒಂದು ಹಣ್ಣನ್ನು ಕಂಡಾಗ ಇನ್ನೊಂದು ಎಲ್ಲೆಂದು ಯಜಮಾನ ಕೇಳದಿರನು. ಆದ್ದರಿಂದ ಇದನ್ನೂ ತಿಂದು ಮಾವಿನಹಣ್ಣು ಸಿಗಲೇ ಇಲ್ಲ ಎಂದು ಹೇಳುವುದೇ ಲೇಸೆ'ಂದು ಯೋಚಿಸಿ ಅವಳು ಅದನ್ನೂ ತಿಂದು ಬಿಟ್ಟಳು.

ಅವಳು ಮತ್ತೊಮ್ಮೆ ಬಾಗಿಲಕಡೆ ನೋಡಿದಳು. ಯಜಮಾನನೂ ಇಲ್ಲ; ಅತಿಥಿಯೂ ಕಾಣೆ, ಆದ್ದರಿಂದ ಮರಳಿ ಬಂದು ಅವಳು ಪುನಃ ಭಕ್ಷ್ಯ ಭೋಜ್ಯಗಳನ್ನು ಸವಿಯತೊಡಗಿದಳು. ಅರ್ಧಕ್ಕಿಂತ ಹೆಚ್ಚು ಮೊದಲ ಬಾರಿಯೇ ಖರ್ಚಾಗಿತ್ತು. ಈಗ ಎಲ್ಲವನ್ನೂ ಬರಿದುಮಾಡಿದಳು.

ತುಸು ಹೊತ್ತಿನಲ್ಲೇ ಯಜಮಾನನು ಬಂದು....'ಅವರು ಬರುತ್ತಿದ್ದಾರೆ. ಔತಣವನ್ನು ಬಟ್ಟಲಿನಲ್ಲಿ ಬಡಿಸಿ ಕೊಂಡು ಬಾ' ಎಂದು ಅಜ್ಞಾಪಿಸಿ, ಮಾವಿನ ಹಣ್ಣು ಕತ್ತರಿಸುವುದಕ್ಕಾಗಿ ಚೂರಿಯನ್ನು ಮಸೆಯಲಾರಂಭಿಸಿದ. ಆಗಲೇ ಅತಿಥಿ ಬಂದು ಬಾಗಿಲು ಬಡಿದ. ಅಡಿಗೆಯವಳು ಬಾಗಿಲು ತೆರೆದು ಗಾಬರಿದನಿಯಲ್ಲಿ ಅವನೊಡನೆ....'ಸ್ವಾಮಿ, ದಯವಿಟ್ಟು ಇಲ್ಲಿಂದ ತಪ್ಪಿಸಿಕೊಳ್ಳಿರಿ. ಇಲ್ಲದಿದ್ದರೆ ಪಶ್ಚಾತ್ತಾಪಪಡಬೇಕಾದೀತು. ಯಜಮಾನರು ನಿಮಗೆ ಔತಣದ ಆಮಂತ್ರಣವಿತ್ತುದೇನೋ ನಿಜ; ಆದರೆ ಊಟಮಾಡಿಸುವ ಬದಲು ಅವರು ನಿಮ್ಮ ಎರಡೂ ಕಿವಿಗಳನ್ನು ಕೊಯ್ದು ಬಿಡುವರು. ಅಲ್ಲಿ ನೋಡಿ—ಚೂರಿಯನ್ನು ಹೇಗೆ ಹರಿತಗೊಳಿಸುತ್ತಿದ್ದಾರೆ!' ಎಂದಳು.

ಅತಿಥಿ ಇಷ್ಟನ್ನು ಕೇಳುತ್ತಲೇ ಹೆದರಿ ಓಡತೊಡಗಿದ. ಅಡಿಗೆಯವಳು ಬಂದು ಯಜಮಾನನೊಡನೆ—'ಆಹಾ! ಎಂತಹ ಅತಿಥಿಗಳನ್ನು ಕರೆದಿರಪ್ಪಾ! ನಾನು ಊಟದ ಬಟ್ಟಲನ್ನೂ ಎರಡು ಹಣ್ಣುಗಳನ್ನೂ ಕೊಂಡುಹೋಗುವಾಗಲೇ ದಾರಿಯಲ್ಲಿ ಅತಿಥಿಗಳು ಸಿಕ್ಕಿದರು. ಕೂಡಲೇ ನನ್ನ ಕೈಯಿಂದ ಅವೆಲ್ಲವನ್ನೂ ಕಿತ್ತುಕೊಂಡು, ಇಲ್ಲಿಂದ ಓಡಿಹೋಗುತ್ತಿದ್ದಾರೆ.' ಎಂದಳು.

ಯಜಮಾನ ಬೆರಗಾಗಿ....'ಕನಿಷ್ಟಪಕ್ಷ ಒಂದು ಹಣ್ಣನ್ನಾದರೂ ನನಗಾಗಿ ಬಿಡಬಾರದಿತ್ತೆ?' ಎಂದು ಯೋಚಿಸುತ್ತ, ಕೈಯಲ್ಲೇ ಚೂರಿಹಿಡಿದು ಓಡತೊಡಗಿದ. 'ಒಂದಕ್ಕಿಂತ ಹೆಚ್ಚು ಬೇಡ; ಒಂದೇ ಒಂದು ಸಾಕು' ಎಂದು ಕೂಗುತ್ತ ಕೂಗುತ್ತ ಅವನನ್ನು ಹಿಂಬಾಲಿಸಿದ.

'ಒಂದು ಕಿವಿ ಕೇಳುತ್ತಿದ್ದಾನೆಂ'ದು ಭಾವಿಸಿದ ಅತಿಥಿ ಒನ್ಮೆಯೂ ಹಿಂದಿರುಗಿ ನೋಡದೆ ಜೀವದಾಸೆತೊರೆದು ಓಟಕ್ಕಿತ್ತನು.

---

೬. ಯೋಗ್ಯ ಚಿಕಿತ್ಸೆ

ಒಂದು ಒಂಟೆಯ ಗಂಟಲಿನಲ್ಲಿ ಸಣ್ಣದೊಂದು ಕಲ್ಲಂಗಡಿಹಣ್ಣು ಸಿಕ್ಕಿಕೊಂಡಿತು. ಇದರಿಂದ ಅದರ ಕುತ್ತಿಗೆ ಉಬ್ಬಿಹೋಯಿತು. ಅದು ಎಷ್ಟು ಪ್ರಯತ್ನಿಸಿದರೂ ಆ ಹಣ್ಣನ್ನು ತಪ್ಪಿಸಿಕೊಳ್ಳಲಾಗಲಿಲ್ಲ. ಹೀಗೆಯೇ ಇದ್ದರೆ ಸ್ವಲ್ಪ ಹೊತ್ತಿನಲ್ಲಿ ಒಂಟೆ ಸತ್ತುಹೋಗುವುದೆಂದು, ಅದರ ಯಜಮಾನನು ಭಾವಿಸಿದ. ಕಟ್ಟಕಡೆಗೆ ಅವನು ಎರಡು ದೊಡ್ಡ ಇಟ್ಟಿಗೆಗಳನ್ನು ಎತ್ತಿತಂದ. ಎಡಗೈಯಿಂದ ಒಂದು ಇಟ್ಟಿಗೆಯನ್ನು ಅದರ ಕುತ್ತಿಗೆಯ ಕೆಳಗಿಟ್ಟು ಬಲಗೈಯಿಂದ ಉಬ್ಬಿದ ಭಾಗಕ್ಕೆ ಮತ್ತೊಂದು ಇಟ್ಟಿಗೆಯಿಂದ ಬಡಿದುಬಿಟ್ಟ. ಪೆಟ್ಟು ತಗಲುತ್ತಲೇ ಆ ಹಣ್ಣು ಒಡೆದು ಸಿಪ್ಪೆಸಮೇತ ಒಂಟೆಯ ಹೊಟ್ಟೆಯೊಳಗೆ ಹೋಯಿತು. ಹೀಗೆ ಅದರ ಪ್ರಾಣವುಳಿಯಿತು.

ರೈತನೊಬ್ಬನು ಸಮೀಪವೇ ನಿಂತು ಇದೆಲ್ಲವನ್ನೂ ನೋಡುತ್ತಿದ್ದ. 'ಕುತ್ತಿಗೆ ಬಾತರೆ ಒಂದು ಒಳ್ಳೆಯ ಔಷಧಿ ತಿಳಿದಂತಾಯಿತು. ಇದರಿಂದ ನಾನು ಸಾಕಷ್ಟು ಸಂಪಾದಿಸಬಲ್ಲೆ'............ಎಂದು ಯೋಚಿಸಿ ಊರಿಗೆ ನಡೆದ. ಕುತ್ತಿಗೆ ಬಾತರೆ ತನ್ನ ಬಳಿ ಒಳ್ಳೆಯ ಔಷಧವಿದೆಯೆಂದೂ ಸಾರಿಬಿಟ್ಟ.

ಒಂದು ದಿನ ಅದೃಷ್ಟವಶಾತ್ ಕುತ್ತಿಗೆ ಬಾತ ಬಡರೋಗಿಯೊಬ್ಬನು ಇವನ ಬಳಿಗೆ ಬಂದ. ಇವನು ಕೂಡಲೇ ಕಮ್ಮಾರನಲ್ಲಿಂದ ಸುತ್ತಿಗೆ ತರಿಸಿದ. ಅವನನ್ನು ನೆಲದ ಮೇಲೆ ಮಲಗಿಸಿ ಕುತ್ತಿಗೆಯ ಕೆಳಗೆ ಕಬ್ಬಿಣದ

ತುಂಡಿಟ್ಟು ಕುತ್ತಿಗೆಯ ಮೇಲೆ ಸುತ್ತಿಗೆಯಿಂದ ಗಟ್ಟಿಯಾಗಿ ಬಡಿದ. ಪಾಪದ ರೋಗಿ ಕೂಡಲೇ ಸತ್ತುಹೋದ.

ಆದ್ದರಿಂದ ಯಾವ ಕೆಲಸವನ್ನಾದರೂ ಚೆನ್ನಾಗಿ ಯೋಚಿಸಿಯೇ ಮಾಡಬೇಕು. ಅಂಧಾನುಕರಣದಿಂದ ನಮಗೆ ಮಾತ್ರವಲ್ಲ—ಉಳಿದವರಿಗೂ ಕೇಡಾಗುವ ಸಂಭವವಿದೆ.

---

೭. ಮಾರವಾಡಿಯ ಸ್ವಪ್ನ

ಸೇಠರೊಬ್ಬರು ಒಂದೂರಿಗೆ ಹೋಗುತ್ತಿದ್ದರು. ದಾರಿಯಲ್ಲಿ ಅವರಿಗೊಬ್ಬ ಮಾರವಾಡಿ ಸಿಕ್ಕಿದ. ಇವನೊಟ್ಟಿಗೆ ಪ್ರಯಾಣ ಬೆಳಸಿದರೆ ಉತ್ತಮವೆಂದು ಸೇಠರು ಯೋಚಿಸಿದರು. ಆದ್ದರಿಂದ ಅವರು ಅವನೊಡನೆ........ 'ಸ್ವಾಮಿ, ಎಲ್ಲಿಗೆ ಹೊರಟಿರಿ?' ಎಂದು ಕೇಳಿದರು. 'ನಾನು ರಾಮಪುರಕ್ಕೆ ಹೊರಟಿದ್ದೇನೆ. ನೀವು?'—ಎಂದ ಮಾರವಾಡಿ.

'ನಾನು ಅದರ ಮುಂದಿನೂರು ಮೋಹನಪುರಕ್ಕೆ ಹೋಗುವವನು. ಇಬ್ಬರೂ ಒಟ್ಟಿಗೇ ಹೋಗೋಣ' ಎಂದರು. ಅವರಿಬ್ಬರೂ ಹರಟುತ್ತ ಸಾಗಿದರು. ಹೋಗುತ್ತ ಹೋಗುತ್ತ ಸಂಜೆಯಾಯಿತು. ಅವರಿಬ್ಬರೂ ದಾರಿಯಲ್ಲಿ ಸಿಕ್ಕಿದ ಒಂದು ಊರಿನಲ್ಲಿ ಇಳಿದುಕೊಂಡರು.

ಈಗ ಇಬ್ಬರಿಗೂ ಊಟದ ನೆನಪಾಯಿತು. ಸೇಠರು ಮಾರವಾಡಿಯ ಕೈಯಲ್ಲಿ ಒಂದು ರೂಪಾಯಿಯನ್ನಿಟ್ಟು....'ಅಂಗಡಿಗೆ ಹೋಗಿ ಹಿಟ್ಟು, ತುಪ್ಪ, ಮಸಾಲೆ, ಕಟ್ಟಿಗೆ ಎಲ್ಲವನ್ನೂ ತಾ' ಎಂದು ಕಳುಹಿಸಿದರು. ಮಾರವಾಡಿಯು ಎಲ್ಲಾ ಸಾಮಾನುಗಳನ್ನು ತಂದು ರೊಟ್ಟಿ ತಯಾರಿಸತೊಡಗಿದ. ಒಟ್ಟು ೭ ರೊಟ್ಟಿಗಳಾದುವು. ಊಟದ ಸಿದ್ಧತೆಯಾದಾಗ ಮಾರವಾಡಿ ಸೇಠರಿಗೆ ತುಂಬಾ ಸಿಟ್ಟು ಬಂತು. 'ನನ್ನ ರೂಪಾಯಿಯಿಂದ ಈ ರೊಟ್ಟಿಗಳು ತಯಾರಾಗಿವೆ. ಆದ್ದರಿಂದ ನಾನು ನಾಲ್ಕು ತಿನ್ನುವೆ' ಎಂದು ಹೇಳುತ್ತಿದ್ದರು. 'ನಾನೇ ಇಷ್ಟೆಲ್ಲ ಪ್ರಯತ್ನಪಟ್ಟು ಸಾಮಾನನ್ನು ತಂದು, ಕಷ್ಟದಿಂದ ರೊಟ್ಟಿ ತಯಾರಿಸಿದೆ. ನನ್ನ ಪಾಲಿಗೇ ನಾಲ್ಕು ರೊಟ್ಟಿ ಬರಬೇಕು' ಎಂದು ಮಾರವಾಡಿ ಹೇಳುತ್ತಿದ್ದ.

ತುಸು ಹೊತ್ತಿನ ವರೆಗೆ ಅವರಿಬ್ಬರೂ ಈ ರೀತಿ ಜಗಳಾಡುತ್ತಾ ಇದ್ದರು. ಜಗಳವು ಹೀಗೆಯೇ ಕೊನೆಗೊಳ್ಳಲಾರದೆಂದು ಸೇಠರು ಭಾವಿಸಿದರು. ಅದಕ್ಕಾಗಿ ಅವರು—

'ಹೀಗೆಯೇ ನಾವು ತೀರ್ಮಾನಕ್ಕೆ ಬರುವುದು ಕಷ್ಟ; ಈಗ ಈ ರೊಟ್ಟಿಗಳನ್ನೆಲ್ಲ ಇಲ್ಲಿಯೇ ಮುಚ್ಚಿಟ್ಟು ಬಿಡು. ನಾವಿಬ್ಬರೂ ನಿದ್ದೆಹೋಗೋಣ; ಬೆಳಗ್ಗೆ ನಮ್ಮ ನಮ್ಮ ಸ್ವಪ್ನದ ವಿಚಾರ ತಿಳಿಸಬೇಕು. ಒಳ್ಳೇ ಕನಸು ಕಂಡವನೇ ನಾಲ್ಕು ರೊಟ್ಟಿಗಳನ್ನೂ ತಿನ್ನಲಿ' ಎಂದರು. ಮಾರವಾಡಿ ಅದಕ್ಕೊಪ್ಪಿದ. ರೊಟ್ಟಿಗಳನ್ನು ಹಾಗೆಯೇ ಮುಚ್ಚಿಟ್ಟು ಅವರಿಬ್ಬರೂ ಮಲಗಿದರು. ಸೇಠರು ಬಹಳ ದಣಿದಿದ್ದುದರಿಂದ ಮಲಗಿದೊಡನೆಯೇ ಗಾಢನಿದ್ರೆಯಲ್ಲಿ ಮಗ್ನರಾದರು.

ಮಾರವಾಡಿಗೆ ಮಾತ್ರ ನಿದ್ದೆ ಬರಲಿಲ್ಲ. ತಾನು ನಾಲ್ಕು ರೊಟ್ಟಿಗಳನ್ನು ಹೇಗೆ ಹೊಡೆಯಬಹುದೆಂಬ ಚಿಂತೆಯಲ್ಲೇ ಅವನು ಮುಳುಗಿದ್ದ. ಕೊನೆಗೆ ಅವನು ಮನದಲ್ಲೇನೋ ನಿರ್ಧರಿಸಿ ಎದ್ದು ಕುಳಿತ; ಮತ್ತು ಮಾತಾಡದೆ ರೊಟ್ಟಿಗಳನ್ನು ತಿನ್ನತೊಡಗಿದ. ಬಹಳ ಹಸಿದಿದ್ದುದರಿಂದ ಅವನು ಒಂದೊಂದಾಗಿ ಎಲ್ಲ ರೊಟ್ಟಿಗಳನ್ನೂ ತಿಂದು ಮುಗಿಸಿ ಮೊದಲಿನಂತೆಯೇ ಮಲಗಿಬಿಟ್ಟ.

ತುಸುಹೊತ್ತಿನಲ್ಲೇ ಸೇಠರು ನಿದ್ದೆಯಿಂದೆಚ್ಚತ್ತರು. ಹಸಿವೆ ತಾಳಲಾರದಷ್ಟಿದ್ದರೂ ನಿರುಪಾಯರಾಗಿ ಹಾಗೆಯೇ ಮಲಗಿದರು. ಬೆಳಗಾದೊಡನೆಯೇ ಅವರು ಬೇಗನೆ ಎದ್ದು ಕುಳಿತರು.

'ಈ ಮಾರವಾಡಿಯು ಶತಮೂರ್ಖ. ನನ್ನಷ್ಟು ಒಳ್ಳೆಯ ಸ್ವಪ್ನ ಖಂಡಿತ ಹೇಳಲಾರ. ನಾನು ಮಾತ್ರ ಅದ್ಭುತ ಸ್ವಪ್ನ ತಿಳಿಸಿ ನಾಲ್ಕು ರೊಟ್ಟಿಗಳನ್ನು ಹೊಡೆಯುತ್ತೇನೆ' ಎಂದು ಯೋಚಿಸಿ ಅವರು ಮಾರವಾಡಿಯನ್ನು ಕೈಹಿಡಿದು ಎಬ್ಬಿಸಿದರು. ಕಣ್ಣುಜ್ಜುತ್ತಾ ಅವನು ಎದ್ದಾಗ ಸೇಠರು 'ಏನಪ್ಪಾ! ಎಂಥ ಸ್ವಪ್ನ ಕಂಡೆ?' ಎಂದು ಕೇಳಿದರು. 'ಮೊದಲು ನಿಮ್ಮ ಸ್ವಪ್ನ ಹೇಳಿ' ಎಂದು ಮಾರವಾಡಿ ಉತ್ತರವಿತ್ತ.

"ಆಗಲಿ, ನಾನೇ ಮೊದಲು ಹೇಳುತ್ತೇನೆ. ಇಂತಹ ಸ್ವಪ್ನವನ್ನು ನೀನೇಕೆ—ನಿನ್ನ ಪೂರ್ವಿಕರೂ ಕಂಡಿರಲಾರರು. ಕೇಳು, ನಾನು ಸ್ವಪ್ನ

ದಲ್ಲಿ, ಇಂದ್ರನ ನಾಲ್ವರು ದೂತರು ಬಂದುದನ್ನು ಕಂಡೆ. ಅವರು ನನ್ನೊಡನೆ....'ಸೇಠರೇ, ಇಂದ್ರಲೋಕದಲ್ಲಿ ಭಾರೀ ಉತ್ಸವ ಜರಗುತ್ತಾ ಇದೆ. ಇಂದ್ರನು ಆದಕ್ಕಾಗಿ ಕರೆಕಳುಹಿಸಿದ್ದಾನೆಂ'ದು ತಿಳಿಸಿದರು. ದೂತರು ತಮ್ಮೊಟ್ಟಿಗೆ ಒಂದು ವಿಮಾನವನ್ನೂ ತಂದಿದ್ದರು. ಅದೇ ವಿಮಾನವನ್ನೇರಿ ನಾನು ಅಮರಾವತಿಗೆ ತೆರಳಿದೆ. ಅಲ್ಲಿಯ ಆನಂದವನ್ನೇನೆಂದು ಬಣ್ಣಿಸಲಿ? ಉದ್ಯಾನಗಳಲ್ಲಿ ಹೂ ಅರಳಿತ್ತು. ಸುಗಂಧಭರಿತಗಾಳಿ ಬೀಸುತ್ತಿತ್ತು. ಕೋಗಿಲೆ ಮಧುರವಾಗಿ ಹಾಡುತಿತ್ತು. ದೇವತೆಗಳು ಸುಂದರ ವಸ್ತ್ರಗಳನ್ನು ಧರಿಸಿ ಅತ್ತಿತ್ತ ತಿರುಗಾಡುತ್ತಿದ್ದರು. ಎಲ್ಲಿ ನೋಡಿದರಲ್ಲಿ ಸಂಭ್ರಮವೇ ಸಂಭ್ರಮ.

"ತುಸುಹೊತ್ತಿನಲ್ಲೇ ಇಂದ್ರನ ದರಬಾರಿಗೆ ತೆರಳಿದೆ. ಬಾಗಿಲಿನಲ್ಲಿ ನಾಲ್ವರು ಕಾವಲುಗಾರರಿದ್ದರು. ಅವರು ನನ್ನನ್ನು ಸ್ವಾಗತಿಸಿದರು. ಎಷ್ಟೊ ಸುಂದರ ಕೊಠಡಿಗಳನ್ನು ದಾಟುತ್ತ ದಾಟುತ್ತ ಕಟ್ಟಕಡೆಗೆ ಸಭಾಮಂಟಪಕ್ಕೆ ತಲುಪಿದೆ. ಸಭೆಯಲ್ಲಿ ದೇವತೆಗಳು ತಂತಮ್ಮ ಆಸನಗಳಲ್ಲಿ ವಿರಾಜಿಸುತ್ತಿದ್ದರು. ಅಪ್ಸರೆಯರು ನರ್ತಿಸುತ್ತಿದ್ದರು. ಇರುಳಿಡೀ ನಾನು ನೃತ್ಯವನ್ನು ನೋಡುತ್ತಾ ಕುಳಿತೆ. ನೃತ್ಯ ಮುಗಿದ ಬಳಿಕ ಇಂದ್ರನ ದೂತರು ನನ್ನನ್ನು ಇಲ್ಲಿ ತಂದುಬಿಟ್ಟರು."

ಇಷ್ಟು ಹೇಳಿ ಸೇಠರು ಮಾರವಾಡಿಯೊಡನೆ....'ನಾನೇನೋ ನನ್ನ ಸ್ವಪ್ನ ವೃತ್ತಾಂತವನ್ನು ತಿಳಿಸಿದೆ. ಈಗ ನೀನೂ ಸ್ವಪ್ನವನ್ನು ಹೇಳು' ಎಂದರು.

'ನೀವೇನೋ ಬಹು ಉತ್ತಮ ಸ್ವಪ್ನವನ್ನು ನೋಡಿದಿರಿ. ಆದರೆ, ನನ್ನ ಸ್ವಪ್ನ ಮಾತ್ರ ತುಂಬ ಭೀಕರವಾದುದು. ಅದನ್ನೆಣಿಸಿದರೆ ನನ್ನ ದೇಹ ಈಗಲೂ ಭಯದಿಂದ ಕಂಪಿಸುತ್ತಿದೆ.'

ಸೇಠರು ಸಂತುಷ್ಟರಾಗಿ...."ಹೂಂ, ಆಗಲಿ, ಹೇಳು' ಎಂದರು.

"ರಾತ್ರಿ ಬಹು ಹೊತ್ತಿನ ತನಕ ಹಸಿವೆಯಿಂದ ನನಗೆ ನಿದ್ದೆಯೇ ಬರಲಿಲ್ಲ. ಕಟ್ಟಕಡೆಗೆ ಕಣ್ಣು ಮುಚ್ಚಿದಾಗ ನಾಲ್ವರು ಯಮದೂತರು ನಿಂತುದನ್ನು ಕಂಡೆ. ಅವರ ಮುಖ ಉಗ್ರವಾಗಿತ್ತು. ಕಾಡಿಗೆಯಂತಹ ಕರಿ ಮುಸುಡು, ಕೆಂಗಣ್ಣುಗಳು, ಭಯಂಕರ ಉಡುಪು — ಇವೆಲ್ಲವನ್ನೂ ಕಂಡು

ನಾನು ಗಡಗಡ ನಡುಗತೊಡಗಿದೆ. ನನ್ನ ಬಳಿ ಬಂದು ಅವರು ನನ್ನನ್ನು ಹೊಡೆದೆಬ್ಬಿಸಿದರು. ಮತ್ತು ಜೋರಾಗಿ, 'ಇಲ್ಲಿ ಯಾರ ಆಹಾರವನ್ನಿಟ್ಟದ್ದಿ?' ಎಂದು ಕೇಳಿದರು.

'ಸ್ವಾಮಿ, ನನ್ನ ಗೆಳೆಯರ ಹಾಗೂ ನನ್ನ ಆಹಾರ ಇಲ್ಲಿದೆ' ಎಂದು ಹೇಳಿದೆ. 'ಇದನ್ನು ಈಗಲೇ ತಿಂದು ಮುಗಿಸು'—ಅವರೆಂದರು. ನಾನು ಕೈಮುಗಿದು—'ಸ್ವಾಮಿ, ಇದರ ಅರ್ಧಾಂಶ ನನ್ನ ಗೆಳೆಯನಿಗೆ ಸೇರಿದುದು. ಅವನಿಗೆ ತಿಳಿಸದೆ ಎಲ್ಲವನ್ನೂ ನಾನೊಬ್ಬನೇ ಹೇಗೆ ತಿನ್ನಲಿ?' ಎಂದು ವಿನಂತಿಸಿಕೊಂಡೆ.

ನನ್ನ ಮಾತು ಕೇಳಿ ಯಮದೂತರು ಕಿಡಿಕಿಡಿಯಾದರು. 'ಎಲವೋ ನರಾಧಮ! ಎದ್ದು ತಿನ್ನುತ್ತೀಯೋ ಇಲ್ಲವೋ? ಮಾತಾಡದೆ ತಿಂದರೆ ಸರಿ; ಇಲ್ಲದಿದ್ದರೆ ಪೆಟ್ಟುಹೊಡೆದು ತಿನ್ನಿಸುತ್ತೇವೆ' ಎಂದು ಗದರಿಸಿದರು. ಸೇಠರೇ, ಬೆತ್ತ ಕಂಡರೆ ಭೂತವೂ ಓಡಿಹೋಗುತ್ತದೆ; ಆ ಹೆದರಿಕೆಯಿಂದ ನಾನು ಎದ್ದು ತಿನ್ನತೊಡಗಿದೆ.'

ಈಗ ಮಾತ್ರ ಸೇಠರು ಸಿಟ್ಟುಗೊಂಡು—'ಮೂರ್ಖ, ನನ್ನನ್ನೇಕೆ ಎಬ್ಬಿಸಲಿಲ್ಲ?' ಎಂದು ಪ್ರಶ್ನಿಸಿದರು. ಮಾರವಾಡಿಯು ಬಹು ನಮ್ರತೆಯಿಂದ—"ನಾನು ನಿಮ್ಮನ್ನು ಎಷ್ಟೋ ಬಾರಿ ಕರೆದೆ. ಆದರೆ ನೀವು ಇಂದ್ರಸಭೆಯಲ್ಲಿ ನೃತ್ಯ ನೋಡುವುದರಲ್ಲೇ ಮಗ್ನರಾಗಿರುವಾಗ ನನ್ನ ಕರೆಯಾದರೂ ಹೇಗೆ ಕೇಳಿಸೀತು? ಎಲ್ಲ ರೊಟ್ಟಿಗಳನ್ನೂ ತಿಂದು ಮುಗಿಸಿದ ಮೇಲೆ ಆ ದುಷ್ಟರು ನನ್ನನ್ನು ಬಿಟ್ಟುಹೋದರು. ರೊಟ್ಟಿಗಳನ್ನು ತಿಂದು ನಾನು ಮಲಗಿದಾಗಲೇ ನೀವು ಎಚ್ಚರಗೊಳಿಸಿದಿರಿ" ಎಂದು ಉತ್ತರವಿತ್ತ.

'ಸ್ವಪ್ನವೃತ್ತಾಂತ ಹೇಳುತ್ತಿದ್ದೀಯಾ? ಅಥವಾ ನಿಜಕ್ಕೂ ಹಾಗೆಯೇ ಆಯಿತೆ?' ಸೇಠರು ಕೇಳಿದರು. 'ಬೇಕಿದ್ದರೆ ಪಾತ್ರೆಯನ್ನು ತೆಗೆದು ನೋಡಿ' ಮಾರವಾಡಿಯೆಂದ.

ಸೇಠರು ಹೋಗಿ ನೋಡಿದಾಗ ಒಂದೂ ರೊಟ್ಟಿಯು ಉಳಿದಿರಲಿಲ್ಲ. ಈ ಮಾರವಾಡಿಯು ತನಗಿಂತಲೂ ಜಾಣ ಎಂದು ಅವರರಿತರು.

೮. ದುಃಖದ ಬೆಟ್ಟ

ಮನುಷ್ಯಜಾತಿಯ ದುಃಖಗಳನ್ನೆಲ್ಲ ಒಟ್ಟುಗೂಡಿಸಿ ಅವುಗಳನ್ನು ತಿರುಗಿ ಸರಾಸರಿ ಹಂಚಿಬಿಟ್ಟರೆ, ಈಗ ತಾನು ಎಲ್ಲರಿಗಿಂತಲೂ ಅತೀ ದುಃಖಿಯೆಂದು ಹೇಳುತ್ತಿರುವ ಮನುಷ್ಯನೂ ಆಗ, ತನ್ನ ಮೊದಲಿನ ಸ್ಥಿತಿಯೇ ಉತ್ತಮವಿತ್ತೆಂದು ಹೇಳುವನೆಂಬುದಾಗಿ ಸಾಕ್ರೇಟಿಸರ ಹೇಳಿಕೆ. ಯಾರೊಡನೆ ನಿನ್ನ ಸ್ಥಿತಿಯನ್ನು ಬದಲಿಸಿಕೊಂಡರೂ ನಿನ್ನ ಮೊದಲ ಸ್ಥಿತಿಯೇ ಉತ್ತಮವಿತ್ತೆಂದು ನಿನಗೆ ತಿಳಿಯುತ್ತದೆಂದು ಅನುಭವಿ ಕವಿ ಹೋರೇಸನು ನುಡಿದಿದ್ದಾನೆ.

ನಾನು ಆರಾಮಕುರ್ಚಿಯ ಮೇಲೊರಗಿ ಈ ಎರಡೂ ವಾಕ್ಯಗಳ ಕುರಿತು ವಿಚಾರಮಾಡುತ್ತಿರುವಾಗಲೇ ಕಣ್ಣು ತನ್ನಂತೆಯೇ ಮುಚ್ಚಿಕೊಂಡು ಒಂದು ಕನಸು ಕಾಣತೊಡಗಿತು.

'ಮನುಷ್ಯರೆಲ್ಲ ತಂತಮ್ಮ ದುಃಖಗಳ ಗಂಟು ಕಟ್ಟಿತಂದು ಈ ಮೈದಾನಿನಲ್ಲಿ ಹಾಕಲಿ' ಎಂದು ಬ್ರಹ್ಮನು ಡಂಗುರಬಾರಿಸಿದ. ಇದನ್ನು ಕೇಳಿ ಎಲ್ಲರೂ ತುಂಬಾ ಹರುಷಗೊಂಡರೆಂದು ಮೈದಾನಿನ ಮೂಲೆಯಲ್ಲಿ ನಿಂತು ನಾನು ನೋಡಿದೆ. ಅಲ್ಲಿ ಕಲ್ಪನೆಯೆಂಬ ಸ್ತ್ರೀ ಬೇಗಬೇಗನೆ ಎಲ್ಲರ ಗಂಟುಗಳನ್ನು ಕಟ್ಟಿಸುತ್ತಿದ್ದಳು. ಅವಳ ಬಳಿಯೊಂದು ದೊಡ್ಡ ಕನ್ನಡಿಯಿತ್ತು. ಅದನ್ನವಳು ಪ್ರತಿಯೊಂದು ಗಂಟಿನ ಎದುರಿಗೂ ಇಟ್ಟುಬಿಡುತ್ತಿದ್ದಳು. ಆಗ ಅದು ಬಹು ದೊಡ್ಡದಾಗಿ ತೋರುತ್ತಿತ್ತು. ದುಃಖದ ಹೊರೆಯನ್ನಿಳಿಸುವ ಮಹಾಸುಯೋಗ ತಮಗಿಂದು ದೊರೆತಿದೆಯೆಂದು ಎಲ್ಲರೂ ಮಿತಿಮೀರಿದ ಸಂತಸದಿಂದ ತಮ್ಮ ದುಃಖಗಳ ಗಂಟನ್ನು ಈ ಮೈದಾನಿನಲ್ಲಿ ಇಟ್ಟುಬಿಡುತ್ತಿದ್ದರು.

ಒಬ್ಬ ಮನುಷ್ಯನು ಬಗಲಿನಲ್ಲಿ ತಂದಿದ್ದ ಗಂಟನ್ನು ಕೆಳಗಿಟ್ಟ. ಅದರಲ್ಲಿ ಬಡತನವಿತ್ತು. ಮತ್ತೊಬ್ಬನು ತನ್ನ ಹೆಂಡತಿಯನ್ನೇ ಗಂಟಿನಲ್ಲಿ ಕಟ್ಟಿತಂದಿದ್ದ. ಅಂತೆಯೇ ಒಬ್ಬಳು ತನ್ನ ಪತಿಯನ್ನೇ ರಾಶಿಯಲ್ಲೊಗೆದಳು. ಅಂಗಹೀನರೂ ಬಹುಮಂದಿಯಿದ್ದರು. ಒಬ್ಬನು ತನ್ನ ಕುಬ್ಜತೆಯನ್ನಿಟ್ಟುಹೋದರೆ ಮತ್ತೊಬ್ಬ ತನ್ನ ಚಪ್ಪಟೆ ಮೂಗನ್ನು ಕಟ್ಟಿಟ್ಟ.

ಒಬ್ಬನು ಹೊಟ್ಟೆನೋವನ್ನಿಟ್ಟರೆ ಮತ್ತೊಬ್ಬನು ವಾತವನ್ನು ಹಾಕಿಹೋದ. ಆದರೆ ತನ್ನ ಪಾಪವನ್ನಾಗಲೀ ಮೂರ್ಖತನವನ್ನಾಗಲೀ ಯಾರೂ ಇಡಲಿಲ್ಲ. ದುರ್ಗುಣಗಳಿಗೆ ಬಲಿಬಿದ್ದು ತಾರುಣ್ಯದಲ್ಲೇ ಮುದಿತನವನ್ನು ತಂದುಕೊಂಡ ದುರಾಚಾರಿಯೊಬ್ಬನು ಬಂದ. ಇವನಾದರೂ ತನ್ನ ಪಾಪಗಳನ್ನಿಲ್ಲಿ ಒಗೆದಾನೆಂದು ನಾನೆಣಿಸಿದೆ. ಆದರೆ ಅವನು ಪಾಪಗಳ ಬದಲು, ಅವುಗಳ ನೆನಪನ್ನೇ ಕರವಸ್ತ್ರದಲ್ಲಿ ಕಟ್ಟಿಕಂದಿದ್ದು ಆದನ್ನೇ ಎಸೆದುಹೋದ.

ಇಷ್ಟರಲ್ಲೇ ಕಲ್ಪನಾದೇವಿಯು ನನ್ನ ಬಳಿಗೂ ಬಂದಳು. ನನ್ನ ಮುಖದೆದುರಿಗೆ ಕನ್ನಡಿಹಿಡಿದು—'ಈ ರಾಶಿಯಲ್ಲಿ ನಿನಗೇನಾದರೂ ಇಡಲಿಕ್ಕಿದೆಯೆ?' ಎಂದು ಕೇಳಿದಳು. ನನ್ನ ಚಪ್ಪಟೆಯಾದ ಬೋಡು (ಹಲ್ಲಿಲ್ಲದ) ಬಾಯಿಯು ನನಗೆ ಯಾವಾಗಲೂ ಅಸಹ್ಯವೆನಿಸುತ್ತಿತ್ತು. ಕನ್ನಡಿಯಿಂದ ನೋಡುವಾಗ ಮತ್ತೂ ವಿಕಾರವಾಗಿ ತೋರುತ್ತಿತ್ತು. ಆದ್ದರಿಂದ ನಾನು ವಿನಮ್ರನಾಗಿ—'ದೇವಿ, ನನಗೆ ರಾವಣನ ಬಾಯಂತಿರುವ ಈ ಬಾಯಿ ಬೇಡ. ಆದ್ದರಿಂದ ನಾನು ಇದನ್ನೇ ರಾಶಿಯಲ್ಲಿಡುತ್ತೇನೆ'ಂದು ತಿಳಿಸಿದೆ; ಅಲ್ಲದೆ ನನ್ನ ಮುಖಾಕೃತಿಯನ್ನು ಆ ರಾಶಿಯಲ್ಲೆಸೆದೆ. ನನ್ನ ಸಮೀಪವೇ ಜೋಲುಬಾಯಿಯ ಆಸಾಮಿಯೊಬ್ಬ ನಿಂತಿದ್ದ. ಅವನು ನನ್ನನ್ನನುಕರಿಸಿ ಆ ಜೋಲುಬಾಯಿಯನ್ನೇ ರಾಶಿಯಲ್ಲೊಗೆದ. ನಾವೆಲ್ಲ ನೋಡುತ್ತ ನಿಂತಂತೆಯೇ ಬ್ರಹ್ಮನು ಪುನಃ ಡಂಗುರಹೊಡೆಯಿಸಿ—'ಈ ರಾಶಿಯಲ್ಲಿ ಎಲ್ಲ ರೀತಿಯ ವಸ್ತುಗಳೂ ಇವೆ; ಅವನ್ನು ಗಂಟುಕಟ್ಟಿ ಕಲ್ಪನಾದೇವಿಯು ನಿಮ್ಮೆದುರಿಗಿಡುತ್ತಾಳೆ. ಅವುಗಳಲ್ಲಿ ಒಂದೊಂದನ್ನು ತೆಗೆದುಕೊಳ್ಳಿ' ಎಂದು ಅಪ್ಪಣೆಯಿತ್ತ. ಒಬ್ಬ ಮನುಷ್ಯ ಹೊಟ್ಟೆಯ ರೋಗವನ್ನಿಟ್ಟು ಹೋಗಿದ್ದಾನಷ್ಟೆ. ಅವನಿಗೆ ಆಸ್ತಿ ಬೇಕಾದಷ್ಟಿದ್ದರೂ ಪುತ್ರಸಂತಾನವಿದ್ದಿಲ್ಲ. ಅದಕ್ಕಾಗಿ ಅವನ ಭಾಗಕ್ಕೆ ಹುಡುಗನ ಗಂಟು ಸಿಕ್ಕಿತು. ಆದರೆ ಅರ್ಧ ಗಂಟೆಯೊಳಗೇ ಆ ಹುಡುಗನು ಮುದುಕನ ಗಡ್ಡಹಿಡಿದು, ಅವನ ಅಳಿದುಳಿದ ಹಲ್ಲುಗಳನ್ನೂ ಉದುರಿಸಿಹಾಕುವಷ್ಟು ದೊಡ್ಡ ಕೇಡಿಯಾದ.

ಒಬ್ಬ ಅಂಚೆಪೇದೆಯು ದಿನಾಲೂ ಕಾಗದಗಳನ್ನು ತೆಗೆದುಕೊಂಡು ೧೦-೧೨ ಊರುಗಳಿಗೆ ಅಲೆಯಬೇಕಿತ್ತು. ಇದರಿಂದ ಬೇಸರತಾಳಿ ಅವನು ಕುರ್ಚಿಯ ಮೇಲೆ ಕುಳಿತು ಕೆಲಸಮಾಡುವ ನೌಕರಿ ಬೇಡಿದ. ಅವನ ಪಾಲಿಗೆ ಕುರ್ಚಿಯ ನೌಕರಿಯೂ ಜೊತೆಗೆ ವಾತರೋಗವೂ ಬಂದವು.

ಬಡತನ ಬಿಟ್ಟವನ ಪಾಲಿಗೆ ಕಾಹಿಲೆ ಬಂದುವು. ಹೊಟ್ಟೆಯುರಿ(ಅತ್ಯಗ್ನಿ) ಯನ್ನು ಬಿಟ್ಟವನ ಪಾಲಿಗೆ ಅಜೀರ್ಣರೋಗ ಬಂದಿತ್ತು. ಪತಿಯನ್ನು ಬಿಸುಡಿದವಳ ಪಾಲಿಗೆ ವೈಧವ್ಯವೂ ಹೆಂಡತಿಯನ್ನು ಬಿಟ್ಟವನಿಗೆ ಹೆಂಗಸೇ ಇಲ್ಲದ ಮನೆಯೂ ಸಿಕ್ಕಿದು. ಈಗ ನನ್ನ ಅವಸ್ಥೆ ಕೇಳಿ: ನನ್ನ ನೆರೆಯಾತನಿಗೆ ನನ್ನ ಚಪ್ಪಟೆಯಾದ ಬೋಡುಬಾಯಿ ಸಿಕ್ಕಿತು; ಅದನ್ನು ನೋಡಿ ನಾನು ಕಿಲಕಿಲನೆ ನಕ್ಕುಬಿಟ್ಟೆ. ಪಾಪ, ಅವನಿಗೆ ತುಂಬಾ ಬೇಸರವಾಯಿತು. ನನ್ನ ಪಾಲಿಗೆ ಜೋಲು ಮುಖ ಬಂತು. ಕೈಯನ್ನು ಕೆನ್ನೆಯ ವರೆಗೆ ಕೊಂಡೊಯ್ಯುವಾಗ ಅದು ಮೂಗಿಗೆ ಡಿಕ್ಕಿಹೊಡೆದುದನ್ನು ನಾನೆಂದೂ ಮರೆಯಲಾರೆ.

ಈ ರೀತಿ ಎಲ್ಲರೂ ದುಃಖಗಳಿಂದ ವಿಮುಕ್ತರಾದೆವೆಂದು ಬಗೆದಿದ್ದರು. ಆದರೆ ಹಳೆಯವನ್ನು ಬಿಟ್ಟು ಹೊಸ ದುಃಖ ಕೊಳ್ಳುವುದೇ ನಮ್ಮ ಭಾಗ್ಯವಾಯಿತು. ಅವು ಹೊಸವಾಗಿದ್ದು ನಮಗವನ್ನು ಸಹಿಸುವ ಅಭ್ಯಾಸವಿಲ್ಲದುದರಿಂದ ಮೊದಲ ದುಃಖಗಳಿಗಿಂತಲೂ ಹೆಚ್ಚು ಕಷ್ಟವೆನಿಸಿದುವು. ಇದನ್ನು ಕಂಡು ಬ್ರಹ್ಮನಿಗೆ ನಮ್ಮ ಮೇಲೆ ದಯೆಯುಂಟಾಗಿರಬೇಕು. 'ಬೇಕಾದವರು ಹೊಸ ದುಃಖಗಳನ್ನು ಬಿಟ್ಟು ಹಳೆಯವನ್ನೇ ತೆಗೆದೊಯ್ಯಲೆಂ'ದು ಅವನು ಮತ್ತೊಮ್ಮೆ ಡಂಗುರಹೊಯ್ಸಿದ. ನಾವೀ ಡಂಗುರ ಕೇಳಿ ಬಹು ಸಂತುಷ್ಟರಾಗಿ ಹಿಂದಿನ ದುಃಖಗಳನ್ನೇ ಕೊಳ್ಳಲೆಂದು ಓಡಿ ಬಂದೆವು.

ಇಷ್ಟೆಲ್ಲ ಅನುಭವದ ಬಳಿಕ ಪರಮಾತ್ಮನು ನಮ್ಮ ಮೇಲೆ ಕೃಪೆಯಿಟ್ಟು, ನಮ್ಮ ಬಳಿಗೆ ಪ್ರಜ್ಞೆ(ಬುದ್ಧಿ)ಯೆಂಬ ದೇವಿಯೊಬ್ಬಳನ್ನು ಕಳುಹಿಸಿದ. ಅವಳು ನಮ್ಮ ಕಂಗಳಲ್ಲಿ ಒಂದು ವಿಲಕ್ಷಣ ತೇಜಸ್ಸನ್ನು ತುಂಬಿಸಿ ನಮ್ಮ ದುಃಖಗಳು ಸಣ್ಣದಾಗುವಂತೆ ಮಾಡಿದಳು. ಮತ್ತು ಪ್ರತಿಯೊಬ್ಬನೂ ತನ್ನ ದುಃಖವನ್ನು ಅನುಭವಿಸುವಂತೆ ಸಹನಾಶಕ್ತಿಯನ್ನೂ ಕರುಣಿಸಿದಳು.

ತುಸುಹೊತ್ತಿನಲ್ಲೇ ನಾನು ಕಣ್ದೆರೆದೆ.

(ಎಲ್ಲ ಕಥೆಗಳೂ ಹಿಂದಿಯಿಂದ ಅನುವಾದಿತವಾದುವು.)

ಒಂದಾಣೆ ಮಾಲೆ

ಪ್ರಭಾತ ಆಫೀಸು,

ರಥಬೀದಿ, ಮಂಗಳೂರು-೧.

★

- ಶಾಲಾ ಅಧ್ಯಾಪಕರು
- ವಿದ್ಯಾರ್ಥಿಗಳು
- ಸ್ತ್ರೀಯರು
- ಆಬಾಲವೃದ್ಧರು

ಯಾರೂ ಓದಬಹುದಾದ ಅತ್ಯುತ್ತಮ ಸಾಹಿತ್ಯ ಮಾತ್ರ "ಒಂದಾಣೆ ಮಾಲೆ"ಯಲ್ಲಿ ಪ್ರಕಟವಾಗುತ್ತಿದೆ.

. ಅಶ್ಲೀಲ ಶಬ್ದಗಳಾಗಲಿ, ವಿಷಯಗಳಾಗಲಿ 'ಒಂದಾಣೆ ಮಾಲೆ'ಯಲ್ಲಿ ಬಾರದಂತೆ ಜಾಗರೂಕತೆ ವಹಿಸಲಾಗುವುದು.

ಪ್ರತಿಯೊರ್ವ ವಿದ್ಯಾರ್ಥಿ—ವಿದ್ಯಾರ್ಥಿನಿಯೂ "ಒಂದಾಣೆ ಮಾಲೆ"ಯ ಪುಸ್ತಕಗಳನ್ನು ಕೊಂಡು ಕೊಂಡು ಓದುವಂತೆ, ಅಧ್ಯಾಪಕ—ಅಧ್ಯಾಪಿಕೆಯರು ಅವರಿಗೆ ಸೂಚನೆಕೊಟ್ಟು, ಉತ್ತಮ ಸಾಹಿತ್ಯ ಪ್ರಚಾರದಲ್ಲಿ ನೆರವಾಗಬೇಕಾಗಿ ಕೋರಲಾಗಿದೆ.

Edited, Printed and Published by K. V. Shenoy
at The Prabhat Printers, Ltd., Mangalore-1.